www.vijayadasaru.net

- ಶ್ರೀ. ಎಸ್.ಜಿ. ರಾಮಚಂದ್ರರಾಯ

# ಶ್ರೀ ವಿಜಯದಾಸರ ಮೇಲೆ ಶ್ರೀ ಹರಿಯ ಕೃಪೆ

ಹೇ ಶ್ರೀ ಹರಿ. ನಿನ್ನ ಒಲಿಮೆಯಾದರೆ ಸಮಸ್ತ ಜನರೂ ಬಂದು ಮನ್ನಿಸುತ್ತಾರೆ. ಹೆ ಮಹರಾಯಾ ಇದು ನನ್ನ ಪುಣ್ಯದಿಂದ ನಡೆಯುವುದಲ್ಲ, ನೀನು ದಯಪಾಲಿಸಿದ್ದುದೆ ಸರ್ವಸಂಪತ್ತು. ಮೊದಲಿಗೆ ಮಾಸಿದ ಹರಿದ ಅರಿವೆ ಸಹ ಕಾಣದವನಾಗಿದ್ದೆ, ಈಗ ನೀನ ಒಲಿಯಲು ಉಣ್ಣೆಶಹಲು ಶಕಲಾತಿಗಳು ನಾನಾ ಪರಿಯಿಂದ ದೊರೆಯುವುದು ನೋಡಿದ ಆಶ್ಚರ್ಯವಾಗುತ್ತಿದೆ. ಹಿಂದೆ ಸಂಜೆ ತನಕ ಉಪವಾಸವಿದ್ದು ಸಣ್ಣ ಸವಟು ತುಂಬ ಅಂಬ ಕಾಣದೆ ಇದ್ದೆ, ಹೇ ಶ್ರೀ ಹರಿ ! ಈಗ ನಾನಾ ವ್ಯಂಜನ ಪದಾರ್ಥಗಳು ಸ್ವಾದೋಪೇ ರಸಾಯನ ಸವಿ ಪದಾರ್ಥಗಳನ್ನು ಉಣಿಸುತ್ತಿರುವಿಯಲ್ಲಾ ! ಈ ಎಲ್ಲಾ ಅನುಭವಗಳನ್ನೆಲ "ನಿನ್ನ ಒಲಿಮೆಯಿಂದ ನಿಖಿಳ ಜನರು ಬಂದು ಮನ್ನಿಸುವರೊ ಮಹರಾಯಾ" ಎಂ ದೇವರನಾಮದಲ್ಲಿ ತಾವು ವಿಜಯದಾಸರಾದ ಮೇಲೆ ರಚಿಸಿದ ದೇವರನಾಮದ ವಿಸ್ತಾರವಾಗಿ ತಿಳಿಸಿದ್ದಾರೆ.

ದಾಸಪ್ಪ ಚೀಕನಬರಿವಿಯಲ್ಲಿ ಸಂಸಾರ ನಡೆಸುತ್ತಿರುವಾಗ್ಗೆ ಕೆಲವು ಕಾಲ ಮೌನದಿಂ ತಪಶ್ಚರ್ಯ ಮಾಡುತ್ತಿದ್ದರು. ಅಹಿಕ ಸುಖಸಂಪತ್ತನ್ನು ಎಂದೆಂದೂ ಬಯಸದ ದಾಸಪ್ಪ ನಿ ಪ್ರಾತಃ ಕಾಲಕ್ಕೆ ತಮ್ಮ ಸ್ನಾನಾನ್ಹೀಕ ಮುಗಿಸಿ ಹೊರಟು ಏಕಾಂತ ಸ್ಥಳದಲ್ಲಿ ತಪಸನ್ನಾಚರಿಸು ಇದ್ದು ಮುಸ್ಸಂಜೆ ವೇಳೆಗೆ ಮನೆಗೆ ಹಿಂತಿರುಗುತ್ತಿದ್ದನು. ಯಾವ ಲೌಕಿಕ ಗದ್ದಲವನ ಹಚ್ಚಿಕೊಂಡಿರಲಿಲ್ಲ, ಒಂದು ದಿವಸ ದಾಸಪ್ಪ ಮಾಮೂಲಿನಂತೆ ತಪಸ್ಸಿಗಾಗಿ ಹೋಗಿದ್ದಾ ಮನೆಯಲ್ಲಿ ತಾಯಿ ಕೂಸಮ್ಮ ಮಾತ್ರ ಶ್ರೀ ಹರಿಧ್ಯಾನ ಮಾಡುತ್ತಾ ಮಗನ ಬರುವಿಕೆಯನ ನಿರೀಕ್ಷಿಸುತ್ತಾ ಕುಳಿತಿದ್ದಾರೆ. ಅರಳಮ್ಮ ಸಮೀಪದ ತನ್ನ ಮಿತ್ರರ ಮನೆಗೆ ಹೋಗಿದ್ದಾಳೆ. ಒ ಮಧ್ಯಾಹ್ನ ಸಮಯ. ಬೀದಿಯಲ್ಲಿ ಯಾರ ಸುಳಿವೂ ಇಲ್ಲ,

ಆಗ್ಗೆ ಹೊರಗೆ ಬಾಗಿಲ ಬಳಿ ಪೈಜಣ, ರುಳಿ, ಗೆಜ್ಜೆಗಳ ಸಪ್ಪಳವಾಯಿತು. ಮನೆ ಮುಂಬಾಗಿಲು ತೆಗೆದೇ ಇದ್ದುದರಿಂದ ಒಬ್ಬ ಸುಂದರ ಮುತ್ತೈದೆ ಒಳ್ಳೇ ಜರತಾ ಪೀತಾಂಬರವನ್ನುಟ್ಟು, ಕೈಯಲ್ಲಿ ಒಂದು ದೊಡ್ಡ ತಟ್ಟೆಯ ತುಂಬ ಸುಗಂಧೋಪೇತವಾ ಪಕ್ವಾನ್ನವನ್ನು ಇಟ್ಟುಕೊಂಡು, ಮತ್ತೊಂದು ಕೈಯಲ್ಲಿ ಕೇಸರೀ ನೀರು ತುಂಬಿದ್ದ ಬೆಳ್ಳಿ ತಂಬಿ ಹಿಡಿದು ಬಾಗಿಲ ಬಳಿಗೆ ಬಂದು ಅಮ್ಮಾ ಎಂದು ಕೂಗುತ್ತಾ ದಾಸಪ್ಪನ ಮನೆಯ ಒಳ ಬಂದಳು. ಈಕೆಯ ದರ್ಶನದಿಂದ ಆಶ್ಚರ್ಯಗೊಂಡು ಕೂಸಮ್ಮ ಆಕೆಯನ್ನು ಆದರದಿಂ ಬರಮಾಡಿಕೊಂಡು "ನೀನ್ಯಾರಮ್ಮಾ" ಎಂದು ಕೇಳಿದಳು. ಆ ಮುತ್ತೈದೆಯಾದರೋ ತ ಕೈಗಳಲ್ಲಿದ್ದುದನ್ನೆಲ್ಲಾ ಕೆಳಗೆ ಇಟ್ಟು, ಕೂಸಮ್ಮಗೆ ಪ್ರಣಾಮಗೈದು, ನಾನೊಬ್ಬ ದಾಸಿ. ನ

ಪತಿಗಳು ನಾರಾಯಣರಾಯರು. ದಾಸಪ್ಪನ ಮಿತ್ರರು. ಇಂದು ಶ್ರೀ ಅಶ್ವತ್ಥ ನರಸಿಂಹ ದೇವರಿಗೆ ವಿಶೇಷ ಪೂಜೆ. ನೈವೇದ್ಯ ಮಾಡಿ ದಾಸಪ್ಪಗೂ ಊಟಕ್ಕೆ ಹೇಳಿದ್ದು ಇಷ್ಟು ಹೊತ್ತಾದರೂ ಅವರು ಬರಲಿಲ್ಲವಾಗಿ ಪ್ರಸಾದಗಳನ್ನೆಲ್ಲಾ ಈ ತಟ್ಟೆಯಲ್ಲಿ ಮುಚ್ಚಿ ಕಳುಹಿಸಿದ್ದಾರೆ. ತಂಬಿಗೆಯಲ್ಲಿ ನೀರೂ ಸಹ ಕಳುಹಿಸಿದ್ದಾರೆ. ದಯಮಾಡಿ ನೀವೆಲ್ಲರೂ ಸ್ವೀಕರಿಸಲು ಯಜಮಾನರು ತಿಳಿಸಿದ್ದಾರೆ. ನಾನು ಹೋಗಿ ಬರುತ್ತೇನೆ ಎಂದು ಕೂಸಮ್ಮಗೆ ನಮಸ್ಕರಿಸಿ ಹೊರಡಲುದ್ಯುಕ್ತಳಾದಾಗ ಆಶ್ಚರ್ಯಚಕಿತಳಾದ ಕೂಸಮ್ಮ ಮುತ್ತೈದೆಯನ್ನು ಕುರಿತು ನಿನ್ನ ಹೆಸರು ತಿಳಿಸಮ್ಮಾ, ಯಾವ ಊರು, ಮುತ್ತೈದೆಯರು ಮನೆಗೆ ಬಂದರೆ ಕುಂಕುಮ ಹಚ್ಚಿಕೊಂಡು ಹೋಗಬೇಕೆಂದು ಕುಂಕುಮದ ಬಟ್ಟಲನ್ನು ಆಕೆಯ ಮುಂದೆ ಹಿಡಿದಳು. ಆಗ್ಗೆ ಆಕೆ ನನ್ನ ಹೆಸರು ಲಕ್ಷ್ಮಕ್ಕ ಎಂದು ಹೇಳಿ ಕುಂಕುಮ ಧಾರಣೆ ಮಾಡಿ ಹೊರಟೇಬಿಟ್ಟಳು. ಈ ವಿಚಿತ್ರ ಘಟನೆಯಿಂದ ಎಚ್ಚೆತ್ತುಕೊಳ್ಳಲು ಕೂಸಮ್ಮನಿಗಾದರೂ ಸ್ವಲ್ಪ ಸಮಯ ಹಿಡಿಯಿತು. ನಂತರ ಹೊರಗೆ ಹೋಗಿ ನೋಡುವಾಗ ಯಾರೂ ಕಾಣಲಿಲ್ಲ, ಆ ವೇಳೆಗೆ ಸೊಸೆ ಅರಳಮ್ಮ ವಾಪಸ್ಸಾದಳು. ಈ ಪದಾರ್ಥಗಳನ್ನು ಕಂಡ ಆಕೆಗೂ ಆಶ್ಚರ್ಯವಾಗಿ ಅತ್ತೆಯಿಂದ ನಡೆದ ಸಮಾಚಾರ ತಿಳಿದುಕೊಂಡು ದಾಸಪ್ಪ ತನಗಾಗಲೀ ತಮ್ಮ ತಾಯಿಗಾಗಲೀ ಇದರ ಬಗ್ಗೆ ಸುಳಿವೇಕೆ ಕೊಡಲಿಲ್ಲ ಎಂದು ದಿಗ್ಭ್ರಾಂತಳಾದಳು. ಮತ್ತಷ್ಟು ಸಂಶಯಗ್ರಸ್ಥಳಾದ ಕೂಸಮ್ಮ ಕೂಡಲೇ ಅಶ್ವತ್ಥ ಕಟ್ಟೆಗೆ ಹೋಗಿ ನೋಡಿದಾಗ ಸಂಶಯ ಮತ್ತಷ್ಟು ಗಂಭೀರವಾಯಿತು. ಕೆಲವು ಸಮಯದ ನಂತರ ತನ್ನ ಧ್ಯಾನ, ತಪಗಳನ್ನು ಮುಗಿಸಿ ಮನೆಗೆ ಬಂದ ದಾಸಪ್ಪ ತಾಯಿಗೆ ನಮಸ್ಕರಿಸಿ ಈ ದಿನ ಮನೆಯಲ್ಲಿ ಎಂದೂ ಕಾಣದ ಸುವಾಸನೆ ಕಾರಣವೇನು ಎಂದು ತಾಯಿಯನ್ನು ಕೇಳಿದನು. ಕುತೂಹಲ ಭರಿತಳಾದ ಅರಳಮ್ಮನೂ ಸಹ ಸತ್ಯಾಂಶ ತಿಳಿಯಲು ಕಾತರಳಾಗಿ ಅತ್ತೆಯವರ ಉತ್ತರ ಕೇಳಲುತ್ಸುಕಳಾಗಿ ಪತಿಯ ಪಕ್ಕದಲ್ಲೇ ಬಂದು ನಿಂತಳು.

ಕೂಸಮ್ಮ ಮಗನನ್ನು ಕುರಿತು ಅಪ್ಪಾ ಯಾರೋ ನಿನ್ನ ಸ್ನೇಹಿತರಂತೆ. ನಾರಾಯಣರಾಯರೆಂಬ ನಾಮ. ಇಂದು ಅಶ್ವತ್ಥ ನರಸಿಂಹನಿಗೆ ವಿಶೇಷ ಪೂಜಾ ಮಾಡಲು ಬಂದಿದ್ದು ನಿನಗೂ ನಿನ್ನ ಬರುವಿಕೆಯನ್ನು ಎದುರುನೋಡಿ, ನೀನು ಬಾರದಿದ್ದುದರಿಂದ ಈ ಸಕಲ ಭೋಜನ ಪದಾರ್ಥಗಳೂ ಹಾಗೂ ಬೆಳ್ಳಿಯ ತಂಬಿಗೆಯಲ್ಲಿ ಗಂಗೋದಕವನ್ನೂ ಸಹ ತನ್ನ ಮಡದಿ ಲಕ್ಷ್ಮಕ್ಕನೊಡನೆ ಕಳುಹಿಸಿ ನಿನಗೆ ತಲುಪಿಸಲು ಕಳುಹಿಸಿದ್ದಾರೆ. ಆಕೆ ಇದೆಲ್ಲವನ್ನೂ ಜೋಪಾನವಾಗಿ ತಂದಿಟ್ಟು ನೀವೆಲ್ಲರೂ ಸ್ವೀಕರಿಸಬೇಕೆಂದು ಹೇಳಿ ವಾಪಸ್ಸಾದಳು ಎಂದು ಮಗನಿಗೆ ಕೂಸಮ್ಮ ತಿಳಿಸಿದರು. ಈ ವಿಚಾರವನ್ನು ಆಲಿಸಿದ ಅರಳಮ್ಮನಿಗೂ ಆಶ್ಚರ್ಯ.

ಈ ಪವಾಡದಿಂದ ಚಕಿತನಾದ ದಾಸಪ್ಪ ಮುಂದೆ ಹರಿಯಾಜ್ಞೆಯಿಂದ ವಿಜಯದಾಸರಾದಾಗ ಈ ಘಟನೆಯನ್ನು ನೆನೆಸಿಕೊಂಡು **"ನೀನೋಲಿದದಕೆ ಸೌಖ್ಯವೆ । ರಂಗ । ನಾನೊಲ್ಲೆ ನಾನೊಲ್ಲೆ ಸರ್ವೇಶ । ಮಾನಸದಲಿ ನಿತ್ಯ ನೆರೆನಂಬಿದಂಥ । ಮಾನವನ ಕೂಡ ಮೌನವಾಗಿಪ್ಪರೆ"** ಎಂಬ ಮೂರು ನುಡಿಯ ಸುಂದರ ದೇವರನಾಮವನ್ನು ರಚಿಸಿದ್ದಾರೆ.

---

ಹೇ ಹರಿಯೇ, ವಿಷಯ ಭುಂಜನಗೈಸಿ ವೈರಾಗ್ಯವನ್ನು ಕೊಡುವ ಹರಿಯೇ, ನಾನಾ ಷಡ್ರಸಾನ್ನ ಭೋಜನದ ಆಸೆ ಬಿಡಿಸು. ಒಡಲಿಗೋಸುಗವಾಗಿ ಎಂದಾದರೂ ನಿನ್ನ ನಾ ಪ್ರಾರ್ಥಿಸಿದ್ದೆನೆ ? ಈ ಜಡರಸದಿಂದ ಅಡಿಗಡಿಗೆ ಅಜ್ಞಾನ ಹುಟ್ಟುವುದು. ಕಾರಣ, ಇಹದ ಸೌಖ್ಯ ಕೊಡದೇ ನಿನ್ನ ಧ್ಯಾನ ಪಾಲಿಸಿ ಕಾಪಾಡು ಎಂದು ಪುನಃ ಪುನಃ ಮೊರೆ ಇಡುತ್ತಾ, ಹೇ ಸ್ವಾಮಿ ಇದೇನು ನಿನ್ನ ಆಟ, ಜನ, ಮಹಾಜನ, ರಾಜ ಮರ್ಯಾದೆ ಮನ್ನಣೆ ಇವೆಲ್ಲ ನನಗೆ ನಿನ್ನಾಣೆಯಾಗಿಯೂ ಬೇಡ, ಕೊಡಬೇಡ. ಮನೋ ವಾಚಾ ಕಾಯಾದಿಂದ ತ್ರಿಕರಣ ಶುದ್ಧಿಯಿಂದ ಬೇಡಿಕೊಂಬೆ ಎಂದು ಹಂಬಲಿಸಿದರು. ಒಳ್ಳೇ ಮೃಷ್ಟಾನ್ನ, ಬೆಳ್ಳಿ ತಂಬಿಗೆ ತಾಟು ದೊರಕಿತೆಂದು ದಾಸರು ಕಿಂಚಿತ್ತೂ ಹರ್ಷಪಡಲಿಲ್ಲ, ಇಹದ ಐಶ್ವರ್ಯವು ಮದಕ್ಕೆ ಕಾರಣ. ಇದರಿಂದ ಭಗವಂತನ ವಿಸ್ಮೃತಿ, ಪರಲೋಕ ಹಾನಿ ಎಂದು ಪದೇ ಪದೇ ನೆನಪಿನಲ್ಲಿಟ್ಟು ನಡೆದರೆ ದಾಸರು ಒಲಿದು ಶ್ರೀಶನನ್ನು ತೋರಿಸುವರು.